

# ಫಿನ್ಲೆಂಡ್‌ನ ಕಾಮನಬಿಲ್ಲು

**ಮಾಧ್ಯಮಗಳಿಂದ 'ಕಾಮನಬಿಲ್ಲಿನ ಹುಡುಗಿ' ಎಂದು ಕರೆಸಿಕೊಳ್ಳುವ ಸನ್ನಾ ಮರಿನ್ ಫಿನ್ಲೆಂಡ್‌ನ ಪ್ರಧಾನಿ. ವಿಶ್ವದ ಅತ್ಯಂತ ಕಿರಿಯ ಪ್ರಧಾನಿ ಎನ್ನುವುದು ಅವರ ಹೆಗ್ಗಳಿಕೆ.**

■ ಡಾ. ಸತ್ಯಪ್ರಕಾಶ್ ಎಂ.ಆರ್.

ಮೊದಲನೋಟಕ್ಕೆ ಐರೋಪ್ಯ ದೇಶವೊಂದರ ರೂಪದರ್ಶಿಯಂತೆ ಕಾಣಿಸುವ ಸನ್ನಾ ಮರಿನ್ ಎನ್ನುವ ಈ ಹೆಣ್ಣುಮಗಳು ಫಿನ್ಲೆಂಡ್ ದೇಶದ ಪ್ರಧಾನಿ ಎಂದರೆ ಬಹಳಷ್ಟು ಜನ ಹುಬ್ಬೇರಿಸಿಯಾರು. ಕಳೆದ ಡಿಸೆಂಬರ್ 10ರಂದು ಜಗತ್ತಿನ ಅತ್ಯಂತ ಕಿರಿಯ ವಯಸ್ಸಿನ ಪ್ರಧಾನಿ ಎನ್ನುವ ಖ್ಯಾತಿಯೊಂದಿಗೆ ಅವರು ಫಿನ್ಲೆಂಡ್ ಪ್ರಧಾನಿಯಾದರು. ವಿಶೇಷವೆಂದರೆ, ಸಮ್ಮಿಶ್ರ ಸರ್ಕಾರದ ಪಾಲುದಾರರಾಗಿರುವ ಐದು ಪಕ್ಷಗಳ ನಾಯಕತ್ವ ವಹಿಸಿರುವವರು ಕೂಡ ಮಹಿಳೆಯರೇ!

ಫಿನ್ಲೆಂಡ್ ರಾಜಕಾರಣದಲ್ಲಿ ಮಹಿಳೆಯರ ಪ್ರಾತಿನಿಧ್ಯ ವಿಶೇಷವೇನಲ್ಲ. ಪಕ್ಷಗಳ ಉನ್ನತ ಹುದ್ದೆಗಳು ಮತ್ತು ಸರ್ಕಾರದ ನಾಯಕತ್ವದ ಸ್ಥಾನಗಳಲ್ಲಿ ಗುರುತಿಸಿಕೊಂಡಿದ್ದಾರೆ. 1906ರಷ್ಟು ಹಿಂದೆಯೇ ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ ನೀಡಿದ ಆ ದೇಶದಲ್ಲಿ ಈವರೆಗೆ ಇಬ್ಬರು ಮಹಿಳೆಯರು ಪ್ರಧಾನಿಯಾಗಿದ್ದಾರೆ. ಸನ್ನಾ ಆ ವಿಶಿಷ್ಟ ಪರಂಪರೆಯ ಮುಂದುವರೆದ ಭಾಗವಷ್ಟೆ.

2006ರಲ್ಲಿ 21ನೇ ವಯಸ್ಸಿಗೆ ಸೋಷಿಯಲ್ ಡೆಮೋಕ್ರಾಟಿಕ್ ಯೂತ್ ಪಕ್ಷವನ್ನು ಸೇರುವ ಮೂಲಕ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸುವ ಮರಿನ್, ಆನಂತರ ಹಿಂದಿರುಗಿ ನೋಡಿಲ್ಲ. ಇಪ್ಪತ್ತೇಳನೆಯ ವಯಸ್ಸಿಗೆ ಮೊದಲ ಬಾರಿಗೆ ಟಾಂಪೆರೆ ನಗರಸಭೆಗೆ ಅಧ್ಯಕ್ಷರಾಗಿ ಆಯ್ಕೆಯಾದ ಅವರು, 30ನೇ ವಯಸ್ಸಿನಲ್ಲಿ ಸಂಸತ್ತಿಗೆ ಪ್ರವೇಶ ಪಡೆದಿದ್ದರು. 2019ರ ಜೂನ್‌ನಲ್ಲಿ ಸಾರಿಗೆ ಮತ್ತು ಸಂವಹನ ಸಚಿವೆಯಾಗಿ ಅಧಿಕಾರ ವಹಿಸಿಕೊಂಡಿದ್ದ ಅವರು, ಈಗ 34ನೇ ವಯಸ್ಸಿನಲ್ಲಿ ದೇಶದ ಪ್ರಧಾನಿ.

ಸನ್ನಾ ಸಾಧನೆಯ ಹಾದಿ ಹೂವಿನದ್ದೇನೂ ಆಗಿರಲಿಲ್ಲ. ಪ್ರಧಾನಿ ಹುದ್ದೆಗೆ ಆಯ್ಕೆಯಾದ ಮೇಲೂ ಈಸ್ಟೋನಿಯಾ ದೇಶದ ಸಚಿವರೊಬ್ಬರಿಂದ 'ಸೇಲ್ಸ್ ಗರ್ಲ್' ಎಂದು ಹೀಯಾಳಿಕೆಗೆ ಗುರಿಯಾಗಿದ್ದರು. ಈ ಹೀಯಾಳಿಕೆಗೆ, 'ದೇಶದ ಮೇಲೆ ನನಗೆ ಅಪಾರ ಹೆಮ್ಮೆಯಿದೆ. ಇಲ್ಲಿ ಬಡಕುಟುಂಬಕ್ಕೆ ಸೇರಿದ ಮಗು ಅತ್ಯುತ್ತಮ ಶಿಕ್ಷಣ ಪಡೆಯಲು ಮತ್ತು ಉನ್ನತ ಗುರಿ ಸಾಧಿಸಲು ಸಾಧ್ಯವಿದೆ. ಅಂಗಡಿಯೊಂದರ ಕ್ಯಾಷಿಯರ್ ಪ್ರಧಾನಿಯಾಗಲೂ ಸಾಧ್ಯವಿದೆ' ಎಂದು ಉತ್ತರಿಸಿದ್ದರು.

ಸಾಧಾರಣ ಹಿನ್ನೆಲೆಯಿಂದ ಬಂದ ಸನ್ನಾ, ಸಣ್ಣ ವಯಸ್ಸಿನವಳಾಗಿದ್ದಾಗಲೇ ಆಕೆಯ ತಂದೆ ತಾಯಿ ವಿಚ್ಛೇದನ ಪಡೆದುಕೊಂಡಿದ್ದರು. ಕುಟುಂಬದಲ್ಲಿ ದೈನಂದಿನ ಅಗತ್ಯಗಳಿಗೂ ಪರದಾಡುವ ಸ್ಥಿತಿ ಇತ್ತು. 15ನೇ ವಯಸ್ಸಿಗೆ ಬೇಕರಿಯೊಂದರಲ್ಲಿ ಕೆಲಸಕ್ಕೆ ಸೇರುವ ಬಾಲಕಿ, ಹೈಸ್ಕೂಲ್‌ನಲ್ಲಿ ವ್ಯಾಸಂಗ ಮಾಡುವಾಗಲೇ ಮ್ಯಾಗಜಿನ್‌ಗಳನ್ನು ಮಾರಾಟ ಮಾಡುವ ಮೂಲಕ ಪಾಕೆಟ್ ಮನಿ ಸಂಪಾದಿಸಿಕೊಳ್ಳುತ್ತಿದ್ದಳು.

ತನ್ನ ಕುಟುಂಬದಲ್ಲಿ ವಿಶ್ವವಿದ್ಯಾಲಯದಿಂದ ಪದವಿ ಪಡೆದ ಮೊದಲ ವ್ಯಕ್ತಿ ಸನ್ನಾ. ಆದರೂ ತಾಯಿಯ ಬಗ್ಗೆ ಮಾತನಾಡಲು ಆಕೆಗೆ ಹಿಂಜರಿಕೆ. ಫಿನ್ಲೆಂಡ್‌ನಂತಹ ಮುಂದುವರೆದ ದೇಶದಲ್ಲಿಯೂ ಸಲಿಂಗ ಸಂಬಂಧಗಳ ಬಗ್ಗೆ ಮುಕ್ತವಾದ ವಾತಾವರಣವಿಲ್ಲ. ತನ್ನ ತಾಯಿ ಸಲಿಂಗ ಸಂಬಂಧ ಹೊಂದಿರುವುದು ಒಂದು ರೀತಿಯ ಕಳಂಕವೆಂದು ಸಂದರ್ಶನವೊಂದರಲ್ಲಿ ಸನ್ನಾ ಹೇಳಿದ್ದರು.

ಅತ್ಯಂತ ಸಂಕಷ್ಟದ ಪರಿಸ್ಥಿತಿಯಲ್ಲಿ ಸನ್ನಾ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ನಿಕಟಪೂರ್ವ ಪ್ರಧಾನಿ ಆಂಟಿ ರೆನೆ ರಾಜೀನಾಮೆಗೆ ಅನಾರೋಗ್ಯ ಒಂದೇ ಕಾರಣವಾಗಿರಲಿಲ್ಲ. ದೇಶಾದ್ಯಂತ ಭುಗಿಲೆದ್ದ ಅಂಚೆ ನೌಕರರ ಮುಷ್ಕರವನ್ನು ನಿಭಾಯಿಸಲು ವಿಫಲರಾಗಿದ್ದು ಪ್ರಮುಖ ಕಾರಣಗಳಲ್ಲೊಂದು. ಬಂದ್‌ಗಳು, ಪ್ರತಿಭಟನೆಗಳು ಮತ್ತು ಉತ್ಪಾದನೆ ಸ್ಥಗಿತಗೊಳಿಸುವುದಾಗಿ ದೇಶದ ಮುಂಚೂಣಿಯ ಕಂಪನಿಗಳು ಒಡ್ಡುತ್ತಿರುವ ಬೆದರಿಕೆಗಳನ್ನು ನಿಭಾಯಿಸುವ ಸವಾಲು ಸದ್ಯಕ್ಕೆ ಸನ್ನಾ ಮುಂದಿದೆ.

ಸನ್ನಾ ಮರಿನ್ ಸಂಸತ್ ಸದಸ್ಯರಾಗಿದ್ದಾಗಲೇ ಮಗುವಿಗೆ ಜನ್ಮ ನೀಡಿದ್ದರು. 2018ರಲ್ಲಿ ತನ್ನ ಎಳೆಯ ಕಂದಮ್ಮನಿಗೆ ಹಾಲುಣಿಸುವ ಸೆಲ್ಫಿಯನ್ನು ಇನ್‌ಸ್ಟಾಗ್ರಾಂನಲ್ಲಿ ಯಾವುದೇ ಸಂಕೋಚವಿಲ್ಲದೆ ಪೋಸ್ಟ್ ಮಾಡಿ ಸಂಚಲನ ಮೂಡಿಸಿದ್ದರು.

ಜಾಗತಿಕ ರಾಜಕಾರಣದ ಅತ್ಯುನ್ನತ ಹುದ್ದೆಗಳಲ್ಲಿ ಮಹಿಳೆಯರ ಪ್ರಮಾಣ ಕೇವಲ ಶೇ.5ರಷ್ಟಿರುವ ಪ್ರಸ್ತುತ ಸಂದರ್ಭದಲ್ಲಿ ಸನ್ನಾ ಅವರಂತಹ ನಾಯಕಿಯರು ರಾಜಕಾರಣ, ಮಾಧ್ಯಮರಂಗ, ಉದ್ಯಮ, ಮತ್ತಿತರ ಕ್ಷೇತ್ರಗಳ ನಾಯಕತ್ವ ವಹಿಸಿಕೊಳ್ಳುವ ನಿಟ್ಟಿನಲ್ಲಿ ಮಹತ್ವಾಕಾಂಕ್ಷೆ ಹೊಂದಲು ಮಹಿಳೆಯರಿಗೆ ಸ್ಫೂರ್ತಿಸೆಲೆಯಾಗಿದ್ದಾರೆ ಎಂದರೆ ತಪ್ಪಾಗಲಾರದು.

ವಯಸ್ಸು 34, ಕೈಯಲ್ಲಿ 22 ತಿಂಗಳ ಮಗು, ಐದು ಪಕ್ಷಗಳ ಅಲ್ಪ ಮತದ ಸಮ್ಮಿಶ್ರ ಸರ್ಕಾರ, ಸರ್ವ ಮಹಿಳಾ ಸಚಿವ ಸಂಪುಟ, ರಾಜಕೀಯ ಒತ್ತಡ – ಹೀಗೆ ಹಲಬಗೆಯ ಬಿಕ್ಕಟ್ಟುಗಳ ಮಧ್ಯೆ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಿರುವ ಸನ್ನಾ ಮರೀನ್ ತಮ್ಮ ಸ್ವಸಾಮರ್ಥ್ಯದ ಬಲದಿಂದ ಮಾದರಿ ನಾಯಕಿ ಎನ್ನಿಸಿಕೊಳ್ಳುವ ಸವಾಲಿಗೆ ತಮ್ಮನ್ನೊಡ್ಡಿಕೊಂಡಿದ್ದಾರೆ. ■